# ಸ್ವಾಮಿ ವಿವೇಕಾನಂದರಿಂದ ಹಿಂದೂಧರ್ಮದ ರಕ್ಷಣೆ

**ಸ್ವಾಮಿ ವಿವೇಕಾನಂದರು ಆಧುನಿಕ ಕಾಲದಲ್ಲಿ ಹಿಂದೂ ಧರ್ಮವನ್ನು ರಕ್ಷಿಸಿ, ಪುನರುಜ್ಜೀವನ ಮಾಡಿದ ಮಹನೀಯರು. ಹಾಗೆಯೇ ಇಡೀ ಜಗತ್ತಿಗೆ ಹಿಂದೂ ಧರ್ಮದ ನೈಜ ತತ್ತ್ವಗಳನ್ನು ಪರಿಚಯಿಸಿದವರೂ ಅವರೇ. ಈ ಅಂಶವನ್ನು ಕ್ರಮಬದ್ಧವಾಗಿ ಪರಿಚಯಿಸಿರುವ ಪರಮಪೂಜ್ಯ ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರು. ಕನ್ನಡ, ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಅಪಾರ ವಿದ್ವತ್ತನ್ನು ಹೊಂದಿರುವ ಸ್ವಾಮೀಜಿಯವರ ಹಲವಾರು ಪುಸ್ತಕಗಳು ಅತ್ಯಂತ ಪ್ರಸಿದ್ಧವಾಗಿವೆ. ಇವರು ಉತ್ತಮ ವಾಗ್ಮಿಗಳು ಮತ್ತು ಸಂಗೀತಗಾರರು ಕೂಡ ಹೌದು.**

**ಪ್ರಸ್ತಾವನೆ :** ಹಿಂದೂಧರ್ಮವು ಪ್ರಪಂಚದ ಅತ್ಯಂತ ಪ್ರಾಚೀನ ಧರ್ಮ. ಬೇರಾವ ಧರ್ಮವೂ ಇಲ್ಲದಿದ್ದ ಕಾಲದಲ್ಲಿ ಉಗಮವಾದದ್ದರಿಂದ ಇದಕ್ಕೆ ತನ್ನದೇ ಆದ ವಿಶಿಷ್ಟ ನಾಮಧೇಯವಿರಲಿಲ್ಲ. ಬಹು ಕಾಲಾನಂತರ ಇತರ ಧರ್ಮಗಳ ನಡುವೆ ಅದಕ್ಕೊಂದು ಹೆಸರಿಡಬೇಕಾಗಿಬಂದದ್ದರಿಂದ, ಅದನ್ನು ನಮ್ಮವರು 'ಸನಾತನ ಧರ್ಮ' ಎಂದು ಕರೆದರು. 'ಹಿಂದೂ ಧರ್ಮ' ಎಂಬ ಹೆಸರು ಬ್ರಿಟಿಷರ ಕಾಲದಿಂದ ಬಂದು ಈಗ ಅದೇ ಜನಪ್ರಿಯವಾಗಿ ನಿಂತಿದೆ.

ಕಾಲಗತಿಗೆ ಅನುಸಾರವಾಗಿ ಇತರ ಧರ್ಮಗಳಲ್ಲಿ ಆಂದೋಲನ ಬದಲಾವಣೆಗಳು ಉಂಟಾದಂತೆಯೇ ಹಿಂದೂ ಧರ್ಮದಲ್ಲಿಯೂ ಆಗಿವೆ. ಈ ದೃಷ್ಟಿಯಿಂದ ನೋಡಿದಾಗ ಜೈನ ಬೌದ್ಧ ಧರ್ಮಗಳೂ ಹಿಂದೂಧರ್ಮದ ರೂಪಾಂತರಗಳೆನ್ನಬಹುದು.

ಬ್ರಿಟಿಷರ ಆಡಳಿತದ ಫಲವಾಗಿ ಹತ್ತೊಂಬತ್ತನೆಯ ಶತಮಾನದಲ್ಲಿ ಹಿಂದೂ ಸಮಾಜದಲ್ಲಿ ಏರುಪೇರಾಗುವ ಸೂಚನೆಗಳು ಕಂಡುಬಂದವು.

**ಆಗಿನ ಪರಿಸ್ಥಿತಿ:** ಇಂಗ್ಲಿಷ್ ಶಿಕ್ಷಣ ಪದ್ಧತಿಯಿಂದುಂಟಾದ ಸಂಸ್ಕಾರ ಯುವಜನರ ಮೇಲಾಗಿ ಅವರು ನಮ್ಮ ಸಂಸ್ಕೃತಿಯನ್ನು ಹೀನಾಯವಾಗಿ ಕಾಣುವ ಪ್ರವೃತ್ತಿಯನ್ನು ಬೆಳೆಸಿಕೊಂಡರು. ಅದರ ಪರಿಣಾಮವಾಗಿ ಪಾಶ್ಚಾತ್ಯರ ಜೀವನ ಮೌಲ್ಯಗಳೂ ಕ್ರೈಸ್ತಧರ್ಮವೂ ಅತ್ಯುತ್ತಮವೆಂಬ ಭಾವನೆ ಬೆಳೆಯಿತು. ಅದರ ಅನುಕರಣೆ ಪ್ರಾರಂಭವಾಗಿ ವಿಪರೀತ ಮಟ್ಟಕ್ಕೂ ಹೋಗುವ ಸೂಚನೆಗಳು ಕಂಡುಬಂದವು.

ಇದರ ಪ್ರತಿಕ್ರಿಯೆಯೋ ಎಂಬಂತೆ ಸನಾತನಿಗಳು ಮತ್ತು ಸಂಪ್ರದಾಯಸ್ಥರು ತಮ್ಮ ಪುರೋಹಿತಶಾಹಿಯನ್ನು ಮತ್ತಷ್ಟು ಬಲವಾಗಿ ಪ್ರತಿಪಾದಿಸಿದರು.

ಇಂತಹ ಸಂಧಿಕಾಲದಲ್ಲಿ ಅವತರಿಸಿದ ಭಗವಾನ್ ಶ್ರೀರಾಮಕೃಷ್ಣರು ತಮ್ಮ ಅಪೂರ್ವ ತಪಸ್ಸಿನ ಮೂಲಕ ಮತ್ತು ಅದ್ಭುತ, ಆದರೆ ಅತ್ಯಂತ ಸರಳ ಉಪದೇಶದ ಮೂಲಕ, ನಮ್ಮ ಧರ್ಮದ ಪುನರುಜ್ಜೀವನ ಮಾಡಿ ತಮ್ಮ ನರೇಂದ್ರಾದಿ (ಸ್ವಾಮಿ ವಿವೇಕಾನಂದ) ಶಿಷ್ಯ ಪರಂಪರೆಗೆ ಆ ಕಾರ್ಯವನ್ನು ವಹಿಸಿಕೊಟ್ಟರು.

**ಅಂದಿನ ಹಿಂದೂಸಮಾಜದಲ್ಲಿನ ದೋಷಗಳು:** ಪರಸ್ಪರ ವಿರುದ್ಧವಾದ ಈ ಎರಡು ಪ್ರವೃತ್ತಿಗಳ ಸಂಘರ್ಷದಿಂದ ಅಲ್ಲೋಲ ಕಲ್ಲೋಲವಾದ ಹಿಂದೂಸಮಾಜದಲ್ಲಿ ಕಂಡುಬಂದ ಕೆಲವು ಮುಖ್ಯ ದೋಷಗಳನ್ನು ಹೀಗೆ ವಿವರಿಸಬಹುದು:

ಪಾಶ್ಚಾತ್ಯರ ಅಂಧಾನುಕರಣೆಯಿಂದ ಅಭಿಮಾನಶೂನ್ಯತೆ, ಐಶ್ವರ್ಯವಂತರ ವಿಲಾಸೀಜೀವನ; ಮತ್ತೊಂದು ಕಡೆ ಜನಸಾಮಾನ್ಯರನ್ನು ಸಂಪೂರ್ಣವಾಗಿ ಕಡೆಗಣಿಸಿದ್ದು; ಜಾತಿ ನಿಯಮಗಳ ಅತಿರೇಕ ಆಚರಣೆ; ತತ್ಫಲವಾಗಿ ಜನರಲ್ಲಿ ಅನೈಕ್ಯ; ಅಸ್ಪೃಶ್ಯತೆ ಮೊದಲಾದ ಅನಿಷ್ಟ ಪದ್ಧತಿ ಮತ್ತು ಅವರ ಶೋಷಣೆ: ಬಾಲವಿಧವೆಯರ ಗೋಳುಜೀವನ.

ಈ ದೋಷಗಳನ್ನಲ್ಲದೆ ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ಜೀವನದಲ್ಲಿ ಮತ್ತಷ್ಟು ವಿಷಯಗಳನ್ನೂ ಕಂಡುಕೊಂಡಿದ್ದರು: ಸಾಮಾನ್ಯಜನರು ಕಷ್ಟಮಯ ಜೀವನದಲ್ಲೂ ಧರ್ಮಶ್ರದ್ಧೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಶರೀರದಂಡನೆಯೇ ಧರ್ಮಾಚರಣೆಯ ಮುಖ್ಯವಾದ ಅಂಶವೆಂದು ಭಾವಿಸಿ, ಜನರು ಐಹಿಕ ಜೀವನವನ್ನು ಕಡೆಗಣಿಸಿದ್ದಾರೆ. ವಿದ್ಯಾವಂತ ಜನರಲ್ಲಿಯೂ ಅಧ್ಯಾತ್ಮಶಾಸ್ತ್ರಗಳ ಜ್ಞಾನ ಸಾಲದು. ಪಂಡಿತರೆನ್ನಿಸಿಕೊಂಡವರೂ ಸಾರವನ್ನು ಮರೆತು ಶುಷ್ಕ ಆಚರಣೆಗಳಿಗೆ ಪ್ರಾಧಾನ್ಯವಿತ್ತಿದ್ದಾರೆ. ಉದಾಹರಣೆಗೆ ಪರದೇಶಗಮನದ ಬಹಿಷ್ಕಾರ, ಯುವಜನರೂ ದೈಹಿಕವಾಗಿ ದುರ್ಬಲರು.

**ಧರ್ಮರಕ್ಷಣೆಯ ಕಾರ್ಯ :** 'ಧರ್ಮ' ಎನ್ನುವುದು ಒಂದು ಅಮೂರ್ತತತ್ತ್ವ, ಭಾವನೆ. ಅದನ್ನು ಅರ್ಥಮಾಡಿಕೊಂಡು ಆಚರಿಸಿದರೆ ಮಾತ್ರ ಅದು ನಮಗೆ ಸ್ಪಷ್ಟವಾಗಿ ಗೋಚರವಾಗುತ್ತದೆ. ಆದುದರಿಂದ ಅದರ ವಿಷಯವಾದ ಜ್ಞಾನವನ್ನು ಎಲ್ಲರಲ್ಲೂ – ವಿಶೇಷವಾಗಿ ಪ್ರತಿಭಾವಂತರಲ್ಲಿ – ಹರಡುವ ಪ್ರಯತ್ನವಾಗಬೇಕು. ವಿವೇಕಾನಂದರು ಮಾಡಿದ್ದೇ ಅದನ್ನು. ಮನುಷ್ಯನನ್ನು ಸರಿ ಮಾಡಿದರೆ ಪ್ರಪಂಚವೂ ಸರಿಹೋಗುತ್ತದೆ. ಎಂಬುದೇ ಅವರ ಸಿದ್ಧಾಂತ, ದರ್ಶನ.

ಮನುಷ್ಯನನ್ನು 'ಸರಿ' ಮಾಡುವುದು ಎಂದರೆ ಅವನಿಗೆ ಉತ್ತಮ ಜ್ಞಾನವನ್ನೀಯುವುದು. ಈ ಜ್ಞಾನದಲ್ಲಿ ತತ್ತ್ವ– ಸಿದ್ಧಾಂತಗಳಿಗೆ ಸ್ಥಾನವಿದ್ದಂತೆ, ಅದನ್ನು ನಿಜಜೀವನದಲ್ಲಿ ಆಚರಿಸಲು ಬೇಕಾದ ಪ್ರಾಯೋಗಿಕ ತಿಳಿವಳಿಕೆಯೂ ಇರಬೇಕು. ಇದನ್ನು ವಿವೇಕಾನಂದರು ಹಲವು ರೀತಿಯಲ್ಲಿ ಸಾಧಿಸಿದರು.

ಮೊದಲನೆಯದು ಅವರ ಅದ್ಭುತ, ಅತ್ಯಂತ ಸ್ಫೂರ್ತಿದಾಯಕ ಪ್ರವಚನಗಳು, ಕೆಲವೆಡೆ ಗೌರೀಶಂಕರ ಶಿಖರದಂತೆ ಅತ್ಯುನ್ನತವಾದ ಉಪನಿಷತ್ತಿನ ತತ್ತ್ವಗಳನ್ನು ಘಂಟಾಘೋಷವಾಗಿ ಸಾರಿದ್ದಾರೆ (ಅವರ ಜ್ಞಾನಯೋಗ ಗ್ರಂಥವನ್ನು ಅವಲೋಕಿಸಿ). ಮತ್ತೆ ಕೆಲವೆಡೆ ಅದನ್ನು ದೈನಂದಿನ ಜೀವನದಲ್ಲಿ ಪ್ರಾಯೋಗಿಕವಾಗಿ ಹೇಗೆ ಅಳವಡಿಸಿಕೊಳ್ಳಬಹುದು (ಕರ್ಮಯೋಗ ಗ್ರಂಥವನ್ನು ನೋಡಿ) ಎಂಬುದನ್ನು ಸ್ವಾರಸ್ಯವಾಗಿ ವಿವರಿಸಿದ್ದಾರೆ. ವಿಶ್ವಕೋಶದಂತೆ ಇರುವ ಅವರ ಪ್ರವಚನಗಳಲ್ಲಿ ವ್ಯಷ್ಟಿಗೆ ಸಮಷ್ಟಿಗೆ – ಎರಡಕ್ಕೂ ಬೇಕಾಗುವ ಹತ್ತು ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಕೆಲವು ಪ್ರವಚನಗಳಲ್ಲಂತೂ ತಮಸ್ಸಿನಲ್ಲಿ ಮುಳುಗಿ ಭ್ರಮೆಯಲ್ಲಿ ತೊಳಲಾಡುತ್ತಿರುವ ಹಿಂದೂಸಮಾಜಕ್ಕೆ ಭಯಂಕರ ಚಾಟಿಯೇಟುಗಳನ್ನು ಕೊಟ್ಟಿದ್ದಾರೆ ('ಕೊಲಂಬೊ ಇಂದ ಆಲ್ಮೋರಾಕೆ' ಗ್ರಂಥವನ್ನು ಅಧ್ಯಯನ ಮಾಡಿ).

ಸ್ವಾಮಿ ಹರ್ಷಾನಂದ



ಎಷ್ಟಾದರೂ, ಪ್ರವಚನಗಳು ದೊಡ್ಡ ದೊಡ್ಡ ಸಭೆಗಳಲ್ಲಿ ಮಾತ್ರ ಸರಿಹೋಗುತ್ತವೆ; ವ್ಯಕ್ತಿಜೀವನದಲ್ಲಿ ಅವುಗಳ ಉಪಯೋಗ ಬಹು ಸೀಮಿತ.

ಆದುದರಿಂದಲೇ ಸ್ವಾಮೀಜಿಯವರು ಹಲವಾರು ವೈಯಕ್ತಿಕ ಸಂದರ್ಶನಗಳನ್ನೂ ಕೊಟ್ಟು, ಅನೇಕ ಸಂಶಯಗಳನ್ನು ಪರಿಹರಿಸಿರುವುದಲ್ಲದೆ, ನೇರವಾಗಿ ಮತ್ತು ಸ್ಪಷ್ಟವಾಗಿ ಆಚರಿಸುವ ವಿಧಾನಗಳನ್ನು ತಿಳಿಸಿಕೊಟ್ಟಿದ್ದಾರೆ. ಇದು ಅವರ ಎರಡನೆಯ ಕಾರ್ಯವಿಧಾನ.

ಅವರ ಮೂರನೆಯ ಕಾರ್ಯವೈಖರಿ ಎಂದರೆ ಅವರ ಬರಹಗಳು. ಇವು ಎರಡು ವಿಧ. 'ರಾಜಯೋಗ' ದಂತೆ ಅವರೇ ಕುಳಿತು ಬರೆದಿರುವ ಕೆಲವು ಲೇಖನಗಳು, ಸಂಸ್ಕೃತಸ್ತೋತ್ರಗಳು, ಬಂಗಾಳಿ ಗೀತೆಗಳು ಮತ್ತು ಕೆಲವು ಟಿಪ್ಪಣಿಗಳು; ಎರಡನೆಯದು ಅವರು ಬರೆದಂಥ ನೂರಾರು ಪತ್ರಗಳು.

ನಿಜವಾಗಿ ಹೇಳಬೇಕಾದರೆ ಅವರ ಜ್ವಲಂತ ವ್ಯಕ್ತಿತ್ವದ ಮತ್ತು ಭಾವನೆಗಳ ಪರಿಚಯವಾಗುವುದೇ ಇಲ್ಲಿ. ಸಹೋದರ ಸಂನ್ಯಾಸಿಗಳಿಗೆ, ಶಿಷ್ಯರಿಗೆ ಮತ್ತು ಗೌರವಾನ್ವಿತ ಮಿತ್ರರಿಗೆ ಪತ್ರಗಳನ್ನು ಬರೆಯುವಾಗ ತಮ್ಮ ಮನದಾಳದ ಯೋಚನೆ ಭಾವನೆಗಳನ್ನು ಮುಕ್ತಮನಸ್ಸಿನಿಂದ ಹಂಚಿಕೊಂಡಿದ್ದಾರೆ, ಬಯ್ದಿದ್ದಾರೆ, ಆಣತಿಯಿತ್ತಿದ್ದಾರೆ.

ಯಾವ ಕೆಲಸವನ್ನೇ ಆದರೂ ವ್ಯವಸ್ಥಿತವಾದ ರೀತಿಯಲ್ಲಿ, ಪರಿಣಾಮಕಾರಿಯಾಗಿ ನಿಭಾಯಿಸಬೇಕಾದರೆ ಒಂದು ಸಂಘದ ಅಥವಾ ಸಂಸ್ಥೆಯ ಆಶ್ರಯವಿರಬೇಕು. ಇದನ್ನು ಸ್ವಾಮೀಜಿಯವರು ಅಮೆರಿಕಾದಲ್ಲಿ ಇದ್ದಾಗಲೇ ಮನಗಂಡಿದ್ದರು. ತಮ್ಮ ಗುರುಗಳ ಆಜ್ಞೆಯಂತೆ ತಮ್ಮ ಕನಸನ್ನು ನನಸಾಗಿಸಲು ೧೮೯೭ರಲ್ಲಿ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಧ್ಯೇಯ ವಾಕ್ಯವನ್ನು ಹೊತ್ತಿರುವ ಈ ಸಂಸ್ಥೆಯು ತನ್ನ ನೂರಾರು ಶಾಖೆಗಳ ಮೂಲಕ, ಸಹಸ್ರಾರು ಭಕ್ತರ ಮೂಲಕ, ಉತ್ತಮ ಧಾರ್ಮಿಕ ಮತ್ತು ಸಾಮಾಜಿಕ ಸೇವಾ ಕಾರ್ಯಗಳನ್ನು ಶ್ಲಾಘನೀಯ ರೀತಿಯಲ್ಲಿ ನಿರ್ವಹಿಸುತ್ತಿದೆ. ಆದರೆ ಹಿಂದೂಧರ್ಮದ ಮತ್ತು ಹಿಂದೂ ಸಮಾಜದ ಪುನರುತ್ಥಾನವೇ ಇದರ ಆದರ್ಶ.

**ಹಿಂದೂಧರ್ಮದ ರಕ್ಷಣೆಗಾಗಿ ಸ್ವಾಮಿ ವಿವೇಕಾನಂದರು ಇತ್ತಿರುವ ವಿಶೇಷ ಸಂದೇಶ:** ಸಮಸ್ತ ಹಿಂದೂಗಳೂ, ವಿಶೇಷವಾಗಿ ಯುವಜನರು, ಶರೀರದಾರ್ಢ್ಯವನ್ನು ಬೆಳೆಸಿಕೊಳ್ಳಬೇಕು. ಮೊದಲು ಅನ್ನ, ಅನಂತರ ಉಳಿದದ್ದೆಲ್ಲ. ಆದುದರಿಂದ ಅನ್ನವಿದ್ಯೆ, ಬ್ರಹ್ಮವಿದ್ಯೆ ಎರಡನ್ನೂ ಕಲಿತು ಅವುಗಳ ಸಾಮರಸ್ಯವನ್ನು ಸಾಧಿಸಬೇಕು. ಅದಕ್ಕಾಗಿ ವಿಜ್ಞಾನ, ತಂತ್ರಜ್ಞಾನ – ಇವನ್ನು ಚೆನ್ನಾಗಿ ಕಲಿತು ನಿಷ್ಣಾತರಾಗಿ ಅವುಗಳ ಪ್ರಯೋಜನವನ್ನು ಜನಸಾಮಾನ್ಯರೂ ಪಡೆಯುವಂತಾಗಬೇಕು.

ಜಾತಿಪದ್ಧತಿಯಲ್ಲಿ ದೋಷವಿಲ್ಲ. ಆದರೆ ಅದು ಅಸಮಾನತೆಗೆ, ಅಪಮಾನಕ್ಕೆ ಕಾರಣವಾಗಬಾರದು. (ಒಮ್ಮೆ ವಿವೇಕಾನಂದರು ಬೇಲೂರು ಮಠದಲ್ಲಿ ಕೆಳಜಾತಿಯ ಅನೇಕರಿಗೆ ಉಪನಯನ ಸಂಸ್ಕಾರವಿತ್ತು, ಅದನ್ನು 'ದ್ವಿಜೀಕರಣ' ಎಂದು ಕರೆದರು. ಹಿಂದೂಗಳಲ್ಲಿ ಶೂದ್ರರೇ ಇಲ್ಲವೆಂದು ಘೋಷಿಸಿದರು.)

ಸಮಗ್ರ ಹಿಂದೂಸಮಾಜದಲ್ಲಿ 'ನಾವೆಲ್ಲ ಒಂದೇ' ಎಂಬ ಭಾವೈಕ್ಯ ಮೂಡಿರಬೇಕು, ಒಗ್ಗಟ್ಟು ಉಂಟಾಗಬೇಕು.

ವಿದೇಶಸಂಚಾರದ ಮೂಲಕ ಪ್ರಪಂಚವನ್ನು ಚೆನ್ನಾಗಿ ಅರಿಯಬೇಕು. ಅಂಧಾನುಕರಣೆಯನ್ನು ತ್ಯಜಿಸಿ, ಎಲ್ಲರಿಂದಲೂ ಉತ್ತಮಾಂಶಗಳನ್ನು ಮಾತ್ರ ಗ್ರಹಿಸಿ, ನಮ್ಮ ಸ್ವಧರ್ಮ ಸ್ವಭಾವಕ್ಕೆ ತಕ್ಕಂತೆ ಬೆಳೆಯಬೇಕು.

ನಮ್ಮ ಪೂರ್ವಚರಿತ್ರೆಯನ್ನು ಅಭ್ಯಸಿಸಿ, ನಮ್ಮ ಭವ್ಯ ಪರಂಪರೆ ಸಂಸ್ಕೃತಿಗಳ ಬಗ್ಗೆ ಹೆಮ್ಮೆಪಡಬೇಕು. ಆ ಪೂರ್ವಿಕರನ್ನು ಮೀರಿಸಲು ಯತ್ನಿಸಬೇಕು.

ತೊಂದರೆ ಕೊಡುವಂತಹ ಧರ್ಮಶತ್ರುಗಳನ್ನು, ಸಮಾಜಕಂಟಕರನ್ನೂ ನಿಗ್ರಹಿಸಬೇಕು. **ತ್ಯಾಗ ಮತ್ತು ಸೇವೆ** – ಇವು ನಮ್ಮ ರಾಷ್ಟ್ರದ ಆದರ್ಶ ಎಂಬುದನ್ನು ಮರೆಯಬಾರದು.

**ನಿಗಮನ:** ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಮುಖ್ಯ ಯೋಧರಲ್ಲಿ ಒಬ್ಬರಾಗಿದ್ದ ಮತ್ತು ವಿವೇಕಾನಂದರನ್ನು ಕಂಡಿದ್ದ ರಾಜಾಜಿಯವರು ಹೀಗೆಂದಿದ್ದಾರೆ:

"ಸ್ವಾಮಿ ವಿವೇಕಾನಂದರು ಹಿಂದೂಧರ್ಮವನ್ನು ಮತ್ತು ಭಾರತ ದೇಶವನ್ನು ರಕ್ಷಿಸಿದರು. ಅವರು ಬಾರದಿದ್ದರೆ ನಾವು ನಮ್ಮ ಧರ್ಮವನ್ನು ಕಳೆದುಕೊಳ್ಳುತ್ತಿದ್ದೆವು ಮತ್ತು ಸ್ವಾತಂತ್ರ್ಯವನ್ನೂ ಪಡೆಯಲಾಗುತ್ತಿರಲಿಲ್ಲ. ಆದುದರಿಂದ ನಾವು ಅವರಿಗೆ ಚಿರಋಣಿಗಳು!"

ವಿವೇಕಾನಂದರು ಹಿಂದೂಧರ್ಮಕ್ಕೆ ಮಾಡಿದ ಉಪಕಾರವನ್ನು ಇದಕ್ಕಿಂತ ಸೊಗಸಾಗಿ ವರ್ಣಿಸಲು ಸಾಧ್ಯವಿಲ್ಲ.

# ವಿವೇಕ ವೈಭವ ಗಾಥಾ

ಸ್ವಾಮಿ ಜಗದಾತ್ಮಾನಂದ



**ಪರಿಪೂರ್ಣ ಪುರುಷೋತ್ತಮರಾದ ಸ್ವಾಮಿ ವಿವೇಕಾನಂದರ ವೈಭವವನ್ನು ಎಷ್ಟು ಬಣ್ಣಿಸಿದರೂ ಸಾಲದು. ಅವರ ಜೀವನ ಮತ್ತು ಸಂದೇಶಗಳ ಮಹತ್ವವನ್ನು ಹತ್ತು ಹಲವು ಪ್ರಾಸಂಗಿಕ ವಿಷಯಗಳ ಮೂಲಕ ಬಣ್ಣಿಸಿರುವ ವಿನೂತನ ಬಗೆಯನ್ನು ಈ ಅಮೂಲ್ಯ ಲೇಖನದಲ್ಲಿ ಕಾಣುತ್ತೇವೆ. ಇದನ್ನು ರಚಿಸಿಕೊಟ್ಟಿರುವ ಪೂಜ್ಯ ಸ್ವಾಮೀಜಿಯವರು ತಮ್ಮ 'ಬದುಕಲು ಕಲಿಯಿರಿ' ಪುಸ್ತಕದ ಮೂಲಕ ನಾಡಿನಲ್ಲೆಲ್ಲ ವಿಖ್ಯಾತರು. ಈ ಪುಸ್ತಕವು ಹಲವಾರು ಭಾಷೆಗಳಲ್ಲಿ ಅನುವಾದಗೊಂಡು, ಖ್ಯಾತಿಯನ್ನು ಮೆರೆದಿದೆ. ಸ್ವಾಮೀಜಿಯವರು ಅಪ್ರತಿಮ ವಾಗ್ಮಿಗಳು. ನಾಡಿನಾದ್ಯಂತ ಸಂಚರಿಸಿ ರಾಮಕೃಷ್ಣ–ವಿವೇಕಾನಂದ ಭಾವಧಾರೆಯನ್ನು ಕನ್ನಡದ ಜನಮಾನಸಕ್ಕೆ ಮುಟ್ಟಿಸಿದ್ದಾರೆ.**

**ಬಾನು ಭುವಿಗಳ ತಬ್ಬಿ ಹಿಡಿದ ವೀರ ವ್ಯಕ್ತಿತ್ವ**
**ನರರಲ್ಲಿ ಹರನನ್ನು ಕಂಡ ನವ ವೇದಾಂತ ತತ್ತ್ವ**
**ನೋಟದಿಂದಲೇ ನವಿರೇಳುವ ಧೀರ ನಿಲುವು**
**ಹೃದಯದಿ ತುಂಬಿರುವುದು ವಿಶ್ವದೆಲ್ಲದ ನೋವು ನಲಿವು.**
**ಸನಾತನ ಹಿಂದೂಧರ್ಮದ ಸಾಕಾರಮೂರ್ತಿ**
**ದಶದಿಸೆಗೂ ಹರಡಿಸಿದೆ ಭಾರತದ ಕೀರ್ತಿ**
**ದೀನ ದಲಿತರ ಉದ್ಧಾರ ನೀ ಕಂಡ ಕನಸು**
**ಬದುಕು ಬೆಳಗುವ ತಂತ್ರ ನಿನ್ನಿಂದ ನೆನಸು**
**ವಿಶ್ವಮಾನವ ನೀನು ವೇದಾಂತ ಕೇಸರಿ**
**ಜಡತೆ ಬಡಿದೋಡಿಸುವ ಗುರು ನೀನೇ ನರಹರಿ**
**ಶ್ರೀರಾಮಕೃಷ್ಣರು ಕಡೆದಂಥ ದೇವಶಿಲ್ಪ**
**'ಏಳಿ ಎದ್ದೇಳಿ' ಕಹಳೆಯೂದಿ ಸವೆದೆ ಕಾಯಕಲ್ಪ**
**ವಿವೇಕ ವೈಭವ ಗಾಥಾ ನಿಮಗಿದೋ ಅರ್ಪಿತ.**

ನಿರ್ಮಲವಾದ ಆಗಸವನ್ನು ಬೆಳಗುತ್ತಿದ್ದ ಉಜ್ವಲವಾದ ನಕ್ಷತ್ರವೊಂದು ಧರಾಧಾಮವನ್ನು ಪ್ರವೇಶಿಸಿತು.

ಧನ್ಯೆ, ಭುವನೇಶ್ವರಿ ದೇವಿ ! ಎಂಥ ಪುತ್ರರತ್ನವನ್ನು ಪಡೆದಳು ಆಕೆ ! ಸಂನ್ಯಾಸದ ಮಹಾ ಆದರ್ಶವನ್ನು ಮೈಗೂಡಿಸಿಕೊಂಡ ದಿವ್ಯ ಬಾಲಕ ಉದಿಸಿದನು !

ಶ್ರೀರಾಮಕೃಷ್ಣ ಗುರುವಿನ ಪದವನ್ನು ಧರಿಸಿ, ಅಲ್ಲಿ ಶರಣಾದ ನರೇಂದ್ರನ ಪರಿಯನ್ನು ಅಮೃತ ಸರೋವರಕ್ಕೆ ಕಾಲುವೆಯೊಂದನ್ನು ಸೇರಿಸಿದಂತಾಯಿತು ಎಂದು ಕವಿ ವರ್ಣಿಸಿದ್ದಾರೆ. ಇದು ಸ್ವಾರ್ಥದ ಲೇಪಲೇಶವಿಲ್ಲದ ಕೇವಲ ದಯೆ ಕರುಣೆಗಳಿಂದ ಉದ್ಭವಿಸಿದ ಮಹಾಪ್ರವಾಹ. ಜಗತ್ತನ್ನು ತುಂಬಿಕೊಂಡ ದುರಿತ ಅಶಾಂತಿಗಳನ್ನು ದೂರ ಮಾಡುವ ದಿವ್ಯಪ್ರವಾಹ. ಈ ಗುರು ಶಿಷ್ಯರನ್ನು ಹೃದಯದಲ್ಲಿ ತುಂಬಿಕೊಳ್ಳುವ ಹಂಬಲ ನನಗೆ.